# Centre sets new norms to raise varsity standards to global levels

BENGALURU, DHNS: The Union government has come up with new guidelines that would push 20 Indian universities to attain world standards.

Union Minister for Human Resource Development Prakash Javadekar said that there are several universities even from Singapore that have made it to the top 20. In the past, India has had world-class universities like Nalanda. "We have to raise our universities to the same standards. Hence, 10 private and 10 government universities would be chosen for this. They will be selected based on their vision, action plan, experience and the people involved," he said.

Several challenges that NRI students faced were also discussed during the session. The Ministry of External Affairs (MEA) is in the process of gathering data of about 6.5 lakh NRI students, according to Vani Rao, Joint Secretary, MEA. This database would have details of students' degrees, the courses they pursue and duration. "The website with details would later be used to issue advisories to students regarding any frauds," she added.

Among the other challenges, students said that Indian universities ought to merge their academic duration with universities across the world to avoid confusion. They also wanted NRI students to be spared of writing competitive exams in India.

They also voiced concerns pertaining to visa extensions. "Sometimes, the duration of the course does not match the visa validity period. MEA must ensure the visa validity is the same as that of the course," they said.

ಕನ್ನಡಪ್ರಭ



ಕೇಂದ್ರ ಸಚಿವ ಜಾವಡೇಕರ್ ಘೋಷಣೆ | ಶೀಘ್ರ 20 ವಿವಿಗಳ ಸ್ಥಾಪನೆ

# ಭಾರತಕ್ಕೂ ಸಿಗಲಿದೆ ವಿಶ್ವ ದರ್ಜೆ ವಿವಿಗಳ ಸೌಲಭ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದಲ್ಲಿ ಒಟ್ಟು 20 ವಿಶ್ವದರ್ಜೆಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಾಗಿ ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಘೋಷಿಸಿದ್ದಾರೆ. ಈ ವಿವಿಗಳ ಆರಂಭದ ಕುರಿತಂತೆ ಮಾರ್ಗದರ್ಶಿ ಸೂತ್ರಗಳು ಸಿದ್ಧಗೊಂಡಿವೆ ಎಂದೂ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ನಡೆಯುತ್ತಿರುವ ಪ್ರವಾಸಿ ಭಾರತೀಯ ದಿವಸದ ಮೊದಲ ದಿನದ ವಿಶೇಷ ಯುವಪ್ರವಾಸಿ ಭಾರತೀಯ ದಿವಸ್‌ನಲ್ಲಿ ಆಯೋಜಿಸಲಾಗಿದ್ದ 'ಭಾರತದ ಯುವರಾಯಭಾರಿಗಳ ಪೋಷಣೆ- ಹೊರದೇಶದ ಭಾರತೀಯ ವಿದ್ಯಾರ್ಥಿಗಳು-ಭಾರತದಲ್ಲಿರುವ ಅನಿವಾಸಿ ಮತ್ತು ವಿದೇಶಿ ವಿದ್ಯಾರ್ಥಿಗಳು'ಗಳು ಎಂಬ ಗೋಷ್ಠಿಯಲ್ಲಿ ಬಂದ ಹತ್ತಾರು ಸಲಹೆಗಳ ಹಿನ್ನೆಲೆಯಲ್ಲಿ ಈ ಹೇಳಿಕೆ ನೀಡಿದ್ದಾರೆ.

ಭಾರತ ಈ ಮೊದಲು ಜಗತ್ತಿನ ಜ್ಞಾನ ಕೇಂದ್ರವಾಗಿದ್ದು, ಶಿಕ್ಷಣ ವ್ಯವಸ್ಥೆ ನಮ್ಮ ಶಕ್ತಿಯಾಗಿತ್ತು. ಈ ಶಕ್ತಿಯನ್ನು ಕಾಲ ಕಾಲಕ್ಕೆ ವ್ಯವಸ್ಥಿತವಾಗಿ ಕುಗ್ಗಿಸುತ್ತ ಬರಲಾಯಿತು. ಇಂದು ವಿಶ್ವದ ಅತ್ಯುತ್ತಮ ಗುಣಮಟ್ಟದ ವಿವಿಗಳ ಪಟ್ಟಿಯಲ್ಲಿ ಭಾರತದ ಒಂದೂ ವಿವಿ ಇಲ್ಲ. ಹೀಗಾಗಿ ಭಾರತದಲ್ಲಿ ವಿಶ್ವದರ್ಜೆಯ 20 ವಿವಿಗಳನ್ನು ಆರಂಭಿಸಲಾಗುವುದು. 10 ಖಾಸಗಿ ಮತ್ತು 10 ಸರ್ಕಾರಿ ಸ್ವಾಮ್ಯದ ವಿವಿಗಳು ವಿಶ್ವದ ಅತ್ಯುತ್ತಮ ವಿವಿಗಳ ಸಾಲಿನಲ್ಲಿ ನಿಲ್ಲಲಿದೆ ಎಂದರು. ಉತ್ತಮ ವಿವಿಗಳಿರುವ ದೇಶ ಮಾತ್ರ ಅಭಿವೃದ್ಧಿ ಸಾಧಿಸಬಲ್ಲದು. ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬಲ್ಲದು ಎಂದು ಜಾವಡೇಕರ್ ಅಭಿಪ್ರಾಯಪಟ್ಟರು.

**ದಾಖಲೆಗಳ ಡಿಜಿಟಲೀಕರಣ:** ವಿದೇಶಕ್ಕೆ ವ್ಯಾಸಂಗಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳ ಕ್ರೋಢೀಕರಣ ಮತ್ತು ಮಾನ್ಯತೆ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಮೂರರಿಂದ ನಾಲ್ಕು ತಿಂಗಳ ಕಾಲ ತಗಲುತ್ತಿದೆ ಎಂದು ಗೋಷ್ಠಿಯಲ್ಲಿ ವ್ಯಕ್ತವಾದ ಅಭಿಪ್ರಾಯದ ಕುರಿತು ಪ್ರತಿಕ್ರಿಯಿಸಿದ ಸಚಿವರು, ವಿದ್ಯಾರ್ಥಿಗಳ ಎಲ್ಲ ದಾಖಲೆಗಳನ್ನು ಡಿಜಿಟಲೀಕರಿಸುವ ರಾಷ್ಟ್ರೀಯ ಅಕಡೆಮಿಕ್ ಡಿಪಾಸಿಟ್ ಯೋಜನೆ ಮೂರ್ನಾಲ್ಕು ತಿಂಗಳಲ್ಲೇ ಆರಂಭಗೊಳ್ಳಲಿದೆ ಎಂದರು. ಎಲ್ಲ ವಿದ್ಯಾರ್ಥಿಗಳ ಶಿಕ್ಷಣ, ಅವರ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಸೇರಿದಂತೆ ಎಲ್ಲ ದಾಖಲೆಗಳು ಬೆರಳ ತುದಿಯಲ್ಲೇ ಸಿಗುವಂತಾಗಲಿದೆ. ಕೇವಲ ಒಂದು ದಿನದಲ್ಲೇ ಅವರ ಎಲ್ಲ ದಾಖಲೆಗಳ ದೃಢೀಕರಣವೂ ಆಗುವ ವ್ಯವಸ್ಥೆಯಾಗಲಿದ್ದು ವಿದೇಶಕ್ಕೆ ವ್ಯಾಸಂಗಕ್ಕೆ ತೆರಳಬೇಕಾದ ವಿದ್ಯಾರ್ಥಿಗಳ ಬಹುದೊಡ್ಡ ಸಮಸ್ಯೆ ನಿವಾರಣೆ ಆಗಲಿದೆ ಎಂದು ಹೇಳಿದರು.

**₹1 ಲಕ್ಷ ವಿದ್ಯಾರ್ಥಿ ವೇತನ:** ವಿದೇಶದಲ್ಲಿ ಉನ್ನತ ಮಟ್ಟದ ಶೋಧನೆ, ಸಂಶೋಧನೆಗಳಲ್ಲಿ ತೊಡಗುವ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಒಂದು ಲಕ್ಷ ರು. ವಿದ್ಯಾರ್ಥಿ ವೇತನ ನೀಡಲಾಗುವುದು. ಈ ಉದ್ದೇಶಕ್ಕಾಗಿಯೇ 3 ಬಿಲಿಯನ್ ಡಾಲರ್ ಮೀಸಲಿರಿಸಲಾಗಿದೆ ಎಂದು ಜಾವಡೇಕರ್ ತಿಳಿಸಿದರು.

» 08



K RAVI

ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಶನಿವಾರ ಆರಂಭವಾದ ಅನಿವಾಸಿ ಪ್ರವಾಸಿ ಭಾರತೀಯ ದಿವಸ್‌ನಲ್ಲಿ ದೇಶ ವಿದೇಶದಿಂದ ಬಂದ ಪ್ರತಿನಿಧಿಗಳ ನೋಟ

**ಭಾರತದ ವಿದ್ಯಾರ್ಥಿಗಳು ದಕ್ಷಿಣ ಆಫ್ರಿಕಾದಂತಹ ದೇಶಗಳಲ್ಲಿ ಇನ್ನೂ ವರ್ಣಭೇದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇಲ್ಲಿನ ಶಿಕ್ಷಣ ವೆಚ್ಚ ಕೂಡ ವಿಪರೀತವಾಗಿದೆ. ಭಾರತೀಯರಿಗೆ ಇಂತಹ ದೇಶಗಳಲ್ಲಿ ಉದ್ಯೋಗಾವಕಾಶಗಳಲ್ಲೂ ಆದ್ಯತೆ ನೀಡಲಾಗುತ್ತಿಲ್ಲ.**

• **ಇಶಾ ರಣ್‌ಚೋಡ್**
ಪೋರ್ಟ್ ಎಲಿಜಬೆತ್ ದಕ್ಷಿಣ ಆಫ್ರಿಕಾ

**ವಿದೇಶಗಳಲ್ಲೂ ಭಾರತೀಯ ವಿಶ್ವವಿದ್ಯಾಲಯಗಳು ಆರಂಭವಾಗಬೇಕು. ಅಲ್ಲಿನ ವಿವಿಗಳಲ್ಲಿ ಅಧ್ಯಯನ ಮಾಡಿದರೂ ಭಾರತೀಯ ಮೂಲದವರೆಂದರೆ ಸುಲಭವಾಗಿ ಉದ್ಯೋಗ ಸಿಗುವುದಿಲ್ಲ. ಅಲ್ಲಿ ಶಿಕ್ಷಣ ವೆಚ್ಚ ಕೂಡ ಹೆಚ್ಚುತ್ತಿದ್ದು ಅನಿವಾಸಿ ಭಾರತೀಯ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡುವುದು ಕಷ್ಟವಾಗುತ್ತಿದೆ.**

• **ಕೆರಿಶಾ ಮುಂಷಿ** ಡರ್ಬನ್ ದಕ್ಷಿಣ ಆಫ್ರಿಕಾ

ಕನ್ನಡಪ್ರಭ

# ಭಾರತಕ್ಕೂ ಸಿಗಲಿದೆ ವಿಶ್ವ ದರ್ಜೆ ವಿವಿ

೮ ಮೊದಲ ಪುಟದಿಂದ

ವಿದೇಶಕ್ಕೆ ವ್ಯಾಸಂಗಕ್ಕೆ ತೆರಳುವ ವಿದ್ಯಾರ್ಥಿಗಳಿಗೆ ಅನೇಕ ಏಜೆಂಟರು, ಏಜೆನ್ಸಿಗಳು ವಂಚಿಸುತ್ತಿವೆ. ಹೀಗಾಗಿ ಇಂತಹ ಸಂಸ್ಥೆಗಳಿಗೆ ಅಧಿಕೃತ ಮಾನ್ಯತೆ ನೀಡಬೇಕಿದೆ. ಈ ಏಜೆನ್ಸಿಗಳ ಮೇಲೆ ನಿಯಂತ್ರಣ ಹೊಂದುವ ವ್ಯವಸ್ಥೆ ರೂಪಿತವಾಗಬೇಕಿದೆ. ಭಾರತೀಯ ಶಿಕ್ಷಣ ವ್ಯವಸ್ಥೆ ವಿದೇಶಿ ಶಿಕ್ಷಣ ವ್ಯವಸ್ಥೆಗೆ ಹೊಂದಾಣಿಕೆಯಾಗುವಂತೆ ಕ್ಯಾಲೆಂಡರ್ ರೂಪಿಸಬೇಕಿದೆ. ಇಲ್ಲಿನ ಗ್ರೇಡಿಂಗ್/ರ್‍ಯಾಂಕಿಂಗ್ ವ್ಯವಸ್ಥೆಯೂ ಅಲ್ಲಿನ ವ್ಯವಸ್ಥೆಗೆ ಸರಿಹೊಂದುವಂತೆ ಅದೇ ಮಟ್ಟದಲ್ಲಿ ನೀಡಬೇಕಿದೆ ಎಂದರು.

ಭಾರತದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ಕೆಲವೊಂದು ಶಿಕ್ಷಣ ಸಂಸ್ಥೆಗಳಲ್ಲಿ ಅತಿ ಹೆಚ್ಚು ಶುಲ್ಕ ವಸೂಲಿ ಮಾಡಲಾಗುತ್ತಿದೆ. ಇದಕ್ಕೂ ಕಡಿವಾಣ ಹಾಕಬೇಕೆಂಬ ಅಭಿಪ್ರಾಯ ವ್ಯಕ್ತವಾಯಿತು.

> **ಪ್ರವಾಸಿ ಭಾರತೀಯ ದಿವಸ್ ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ. ಇಲ್ಲಿನ ವ್ಯವಸ್ಥೆ ಉತ್ತಮವಾಗಿದೆ. ಭಾರತವನ್ನು ತಿಳಿಯಿರಿ ಕಾರ್ಯಕ್ರಮದಲ್ಲಿ ಇಲ್ಲಿಗೆ ಬಂದಿರುವ ನಾವು ದೇಶದ ಕುರಿತು ಹೆಚ್ಚು ಹೆಚ್ಚು ತಿಳಿದುಕೊಳ್ಳುವಂತಾಗಿದೆ.**
>
> • **ಪ್ರೇಯೋಜ್** ಪ್ರಿಟೋರಿಯಾ (ದಕ್ಷಿಣ ಆಫ್ರಿಕಾ)

ವಿದೇಶಗಳಲ್ಲಿ ಅಧ್ಯಯನ ನಡೆಸುವ ವಿದ್ಯಾರ್ಥಿಗಳ ಖರ್ಚು ವೆಚ್ಚ ಅತ್ಯಂತ ದುಬಾರಿ ಆಗಿರುವುದರಿಂದ ವಿದ್ಯಾರ್ಥಿವೇತನ ಪ್ರಮಾಣವನ್ನು ಹೆಚ್ಚಿಸಬೇಕೆಂಬ ಆಗ್ರಹವೂ ವ್ಯಕ್ತವಾಯಿತು. ಈ ಎಲ್ಲ ಬೇಡಿಕೆಗಳನ್ನೂ ಪರಿಶೀಲಿಸುವುದಾಗಿ ಸಚಿವ ಪ್ರಕಾಶ್ ಜಾವಡೇಕರ್ ಭರವಸೆ ನೀಡಿದರು.

## ಊಟದ ಅವ್ಯವಸ್ಥೆ

ಬೆಂಗಳೂರು: ಮೊದಲ ದಿನವಾದ ಶನಿವಾರ ಕರ್ನಾಟಕ ಸೇರಿ ವಿವಿಧ ರಾಜ್ಯಗಳ ವಸ್ತು ಪ್ರದರ್ಶನ ಮೇಳ ನಡೆಸಲಾಯ್ತು. ಮೇಳಕ್ಕೆ ಕೇಂದ್ರ ಯುವ ಮತ್ತು ಕ್ರೀಡಾ ಸಚಿವ ವಿಜಯ್ ಗೋಯಲ್ ಉದ್ಘಾಟನೆ ನೆರವೇರಿಸಿದರು. ಆದರೆ ಮೊದಲ ದಿನವೇ ಊಟದ ಸಮಸ್ಯೆ ಪರದಾಡುವಂತೆ ಮಾಡಿತು.

ಕಾರ್ಯಕ್ರಮಕ್ಕೆ ದೇಶವಿದೇಶಗಳಿಂದ ಸಾವಿರಾರು ಪ್ರತಿನಿಧಿಗಳು ಮತ್ತು ಉದ್ಯಮಿಗಳು, ಅಧಿಕಾರಿಗಳು, ಪತ್ರಕರ್ತರು ಆಗಮಿಸಿದ್ದರು. ಎಲ್ಲರಿಗೂ ಊಟದ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ಆಯೋಜಕರು ಪೂರ್ವ ಮಾಹಿತಿಯನ್ನೇ ನೀಡಿದ್ದರು. ಅದರಂತೆ ಬ್ಯಾಂಕ್ವೆಟ್ ಹಾಲ್‌ನ 2 ಭಾಗದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಊಟದ ವ್ಯವಸ್ಥೆಯನ್ನು ಪಂಚತಾರ ಹೋಟೆಲ್‌ವೊಂದಕ್ಕೆ ವಹಿಸಿಕೊಡಲಾಗಿತ್ತು.

---

### ವೈದ್ಯರು ಜನವರಿಯೊಳಗೆ ನವೀಕರಿಸಿದರೆ ದಂಡ ವಿನಾಯಿತಿ ಎಂದ ವೈದ್ಯಕೀಯ ಪರಿಷತ್

# ನೋಂದಣಿ ನವೀಕರಣಕ್ಕೆ ಜೂ.30ರ ಗಡುವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ವೈದ್ಯಕೀಯ ಪರಿಷತ್ತು ಎಲ್ಲ ನೋಂದಾಯಿತ ಎಂಬಿಬಿಎಸ್ ಅಲೋಪತಿ ವೈದ್ಯರ ನೋಂದಣಿಯನ್ನು 2017ರ ಜೂನ್ 30ರೊಳಗಾಗಿ ನವೀಕರಿಸಬೇಕೆಂದು ಸೂಚಿಸಿದೆ. ನೋಂದಣಿ ನವೀಕರಣಕ್ಕೆ ಹೈಕೋರ್ಟ್‌ನಿಂದ ಯಾವುದೇ ತಡೆಯಿಲ್ಲ ಎಂದು ಕೌನ್ಸಿಲ್ ಅಧ್ಯಕ್ಷ ಡಾ. ಎಚ್. ವೀರಭದ್ರಪ್ಪ ಎಚ್ ಸ್ಪಷ್ಟನೆ ನೀಡಿದ್ದಾರೆ.

ಶನಿವಾರ ಕೆಎಂಸಿ ಕಚೇರಿಯಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಒಟ್ಟು 70 ಸಾವಿರ ನೋಂದಾಯಿತ ವೈದ್ಯರ ಪೈಕಿ ಇದುವರೆಗೂ ಕೇವಲ 26 ಸಾವಿರ ವೈದ್ಯರು ನವೀಕರಣ ಮಾಡಿಸಿದ್ದಾರೆ. ಜೂ.30ರೊಳಗೆ ದಂಡ ಸಹಿತ ನವೀಕರಣಕ್ಕೆ ಸಮಯಾವಕಾಶವಿದ್ದು ಜನವರಿ ತಿಂಗಳೊಳಗೆ ನೋಂದಣಿ ನವೀಕರಣ ಮಾಡಿಕೊಂಡರೆ ದಂಡದ ವಿನಾಯಿತಿ ಇದೆ ಎಂದು ವೀರಭದ್ರಪ್ಪ ತಿಳಿಸಿದರು.

ಈ ಬಾರಿ ಖುದ್ದು ಹಾಜರಾಗಿ ಬೆರಳಚ್ಚು ಮುಂತಾದ ವಿವರಗಳನ್ನು ನೀಡಿದರೆ ಮುಂದೆ ಆನ್‌ಲೈನ್ ಮೂಲಕವೇ ನವೀಕರಣಕ್ಕೆ ಅವಕಾಶವಿದೆ. ಜೂ.30ರ ನಂತರದಲ್ಲಿ ನೋಂದಣಿ ನವೀಕರಿಸದ ವೈದ್ಯರ ಹೆಸರನ್ನು ರಿಜಿಸ್ಟ್ರಾರ್ ಆಫ್ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾಗೆ ಕಳುಹಿಸಲಾಗುವುದು ಎಂದು ವೀರಭದ್ರಪ್ಪ ಸೂಚಿಸಿದ್ದಾರೆ.

ನೋಂದಣಿ ನವೀಕರಣ ಸಂದರ್ಭದಲ್ಲಿ ಕೆಎಂಸಿ ಡಿಜಿಟಲ್ ಮಾದರಿಯಲ್ಲಿ ವೈದ್ಯರ ಬೆರಳಚ್ಚು, ನೋಂದಣಿಯಲ್ಲಿ ಬಾರ್ ಕೋಡ್, ಡಿಜಿಟಲ್ ಮಾದರಿ ಫೋಟೋ ಮುಂತಾದವುಗಳನ್ನು ಸಂಗ್ರಹಿಸಿ ನಕಲು ಮಾಡಲು ಸಾಧ್ಯವಿಲ್ಲದಂತಹ ಪ್ರಮಾಣ ಪತ್ರ ನೀಡಲಿದೆ ಎಂದರು.

### ಸರ್ಕಾರದ ಆದೇಶಕ್ಕೆ ಕೆಎಂಸಿ ವಿರೋಧ

ಆಯುಷ್ ವೈದ್ಯರಿಗೆ ತುರ್ತು ಸಂದರ್ಭದಲ್ಲಿ ನೀಡುವ 'ಅಲೋಪತಿ ಚಿಕಿತ್ಸೆ ತರಬೇತಿ' ಕುರಿತಂತೆ ಸರ್ಕಾರದ ಆದೇಶಕ್ಕೆ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಅಸಮಾಧಾನ ವ್ಯಕ್ತಪಡಿಸಿದೆ. ಕೆಎಂಸಿ ಬಳಿ ಚರ್ಚಿಸದೇ ಸರ್ಕಾರ ಈ ಆದೇಶವನ್ನು ಹೊರಡಿಸಿದೆ ಎಂದು ವೀರಭದ್ರಪ್ಪ ಆರೋಪಿಸಿದ್ದಾರೆ. ಈ ಕುರಿತಂತೆ ಡಿ.14ರಂದು ಸಭೆ ನಡೆದರೂ ಕೆಎಂಸಿಗೆ ಡಿ.22ರಂದು ಸಭೆಯ ಕುರಿತಂತೆ ನೋಟೀಸ್ ತಲುಪಿರುತ್ತದೆ. ಆಯುಷ್ ವೈದ್ಯ ಪದ್ಧತಿ ಕಲಿತು ಕೇವಲ 6 ತಿಂಗಳಲ್ಲಿ ಅಲೋಪತಿಯನ್ನು ಕಲಿಯುವುದು ಸಾಧ್ಯವೇ ಇಲ್ಲ, 6 ತಿಂಗಳ ತರಬೇತಿ ಪಡೆದು ತುರ್ತು ಸಂದರ್ಭದಲ್ಲಿ ವ್ಯಕ್ತಿಯೊಬ್ಬನಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಆತ ಸಾವಿಗೀಡಾದರೆ ಯಾರು ಹೊಣೆ ಎಂದು ಕೆಎಂಸಿ ಸದಸ್ಯರು ಪ್ರಶ್ನಿಸುತ್ತಾರೆ. ಆದೇಶವನ್ನು 15 ದಿನಗಳ ಕಾಲ ತಡೆ ಹಿಡಿಯುವಂತೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ ಎಂದು ವೀರಭದ್ರಪ್ಪ ತಿಳಿಸಿದರು.

ಉದಯವಾಣಿ



# ದೇಶದಲ್ಲಿ 20 ವಿಶ್ವದರ್ಜೆ ಶಿಕ್ಷಣ ಸಂಸ್ಥೆ ನಿರ್ಮಾಣ

**■ ಯುವಸಮೂಹಕ್ಕೆ ಸ್ವದೇಶದಲ್ಲೇ ಉನ್ನತ ಶಿಕ್ಷಣ ನೀಡಲು ಈ ಕ್ರಮ ■ ಪ್ರಧಾನಿ ಸ್ಕಾಲರ್‌ಶಿಪ್ 1 ಲಕ್ಷ ರೂ.ಗೆ ಹೆಚ್ಚಳ: ಜಾವಡೇಕರ್**

ಬೆಂಗಳೂರು: ಈ ಯುವ ಸಮೂಹವನ್ನು ಸ್ವದೇಶದಲ್ಲೇ ಉನ್ನತ ಶಿಕ್ಷಣದತ್ತ ಸೆಳೆಯಲು ಹಾಗೂ ಗುಣಮಟ್ಟದ ಶಿಕ್ಷಣ ದೊರಕಿಸಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಹೊಸದಾಗಿ ವಿಶ್ವದರ್ಜೆಯ 20 ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಜತೆಗೆ ಪ್ರಧಾನಮಂತ್ರಿ ವಿದ್ಯಾರ್ಥಿ ವೇತನವನ್ನು ಒಂದು ಲಕ್ಷ ರೂ.ಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

ಬೆಂಗಳೂರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ನಡೆಯುತ್ತಿರುವ ಮೂರು ದಿನಗಳ ಪ್ರವಾಸಿ ಭಾರತೀಯ ದಿವಸ ಸಮಾವೇಶದಲ್ಲಿ ಭಾರತೀಯ ಯುವ ರಾಯಭಾರಿಗಳ ಜತೆ ಸಂವಾದ ನಡೆಸಿದ ಅವರು, ಗುಣಮಟ್ಟದ ಉನ್ನತ ಶಿಕ್ಷಣ ಪಡೆಯಲು ನಮ್ಮಲ್ಲಿನ ಸಾಕಷ್ಟು ವಿದ್ಯಾರ್ಥಿಗಳು ವಿದೇಶಕ್ಕೆ ತೆರಳುತ್ತಿದ್ದಾರೆ. ದೇಶದಲ್ಲಿಯೇ ಅಂತಹ ಶಿಕ್ಷಣ ಕಲ್ಪಿಸಿದರೆ ವಿದೇಶಗಳಿಗೆ ಹೋಗುವುದನ್ನು ತಪ್ಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ 10 ಸರ್ಕಾರಿ ವಿಶ್ವವಿದ್ಯಾಲಯ ಸ್ಥಾಪಿಸಿ, 10 ಖಾಸಗಿ ಶಿಕ್ಷಣ ವಿಶ್ವವಿದ್ಯಾಲಯಗಳಿಗೂ ಅನುಮತಿ ನೀಡಲಾಗುವುದು ಎಂದು ತಿಳಿಸಿದರು.

ದೇಶದ ಪ್ರತಿಭೆ ಪಲಾಯನವಾಗಬಾರದು ಎಂಬುದು ನಮ್ಮ ಮೂಲ ಉದ್ದೇಶ. ಹೀಗಾಗಿ, ಯುವ ಸಮೂಹ ಇಲ್ಲೇ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರಧಾನಮಂತ್ರಿ ವಿದ್ಯಾರ್ಥಿ ವೇತನ ಯೋಜನೆಯಡಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪ್ರಸ್ತುತ




ಮಾಸಿಕ ನೀಡುತ್ತಿರುವ ಎರಡು ಸಾವಿರ ರೂ. ಮೊತ್ತವನ್ನು ವರ್ಷಕ್ಕೆ ಒಂದು ಲಕ್ಷ ರೂ.ಗೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ವಿದೇಶಗಳಲ್ಲಿ ಕೆಲವು ಕಡೆ ವಿದ್ಯಾರ್ಥಿ ವೇತನ ಅಧಿಕವಾಗಿ ನೀಡುತ್ತಿರುವುದರಿಂದ ವಿದ್ಯಾಭ್ಯಾಸಕ್ಕಾಗಿ ಅತ್ತ ನಮ್ಮ ವಿದ್ಯಾರ್ಥಿಗಳು ಆಕರ್ಷಿತರಾಗುತ್ತಿದ್ದಾರೆ. ಇದರಿಂದ ದೇಶದಲ್ಲಿನ ಪ್ರತಿಭೆಯೂ ಹೊರಗೆ ಹೋಗುತ್ತಿದೆ. ಇದನ್ನು ತಡೆದು ನಮ್ಮ ವಿದ್ಯಾರ್ಥಿಗಳು ಇಲ್ಲೇ ಶಿಕ್ಷಣ ಪಡೆಯಲು ಉತ್ತೇಜಿಸುವ ದೃಷ್ಟಿಯಿಂದ ವಿದ್ಯಾರ್ಥಿ ವೇತನ ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದರು.

ಭಾರತದಲ್ಲಿ ವಿದ್ಯಾಭ್ಯಾಸ ಮಾಡಲು ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ ವಿಪುಲವಾದ ಅವಕಾಶಗಳಿವೆ. ಭಾರತದಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅವರಿಗೆ ಬೇಕಾದ ಎಲ್ಲ ಸವಲತ್ತು ಒದಗಿಸಲಾಗುವುದು. ಏನೇ ತೊಡಕಿದ್ದರೂ ನಿವಾರಣೆ ಮಾಡಲು ಸರ್ಕಾರ ಬದ್ಧವಿದೆ ಎಂದು ಹೇಳಿದರು. ವಿದೇಶಗಳಲ್ಲಿ ಅತ್ಯುತ್ತಮ ಸಂಶೋಧನಾ ಕೇಂದ್ರಗಳ ಮಾಹಿತಿ ನೀಡಲು ಹಾಗೂ ಸ್ವದೇಶಕ್ಕೆ ಮರಳಿದ ನಂತರ ಹೆಚ್ಚಿನ ಸಂಶೋಧನೆಯಲ್ಲಿ ತೊಡಗಲು ಇಚ್ಛಿಸುವವರಿಗೆ ಪ್ರಯೋಜನವಾಗಲಿ ಎಂಬ ಉದ್ದೇಶದಿಂದ ಜಾಗತಿಕ ಸಂಶೋಧನಾ ಸಂವಾದ ಸಂಪರ್ಕ (ಎನ್‌ಆರ್‌ಐಎನ್) ಕೇಂದ್ರ ಆರಂಭಿಸಲಾಗಿದೆ. ಇದಲ್ಲದೇ ಉನ್ನತ ಶಿಕ್ಷಣ ಹಣಕಾಸು ಏಜೆನ್ಸಿ ವತಿಯಿಂದ ವಿದ್ಯಾರ್ಥಿಗಳ ಅಗತ್ಯ ನೆರವು ನೀಡುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ವಿದೇಶದಲ್ಲಿ ಓದುವವರಿಗೆ ಕಾರ್ಡ್:** ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಧ್ಯಾನೇಶ್ವರ್ ಮುಳೆ, ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಪಾಸ್‌ಪೋರ್ಟ್‌ಗೆ ಸಂಬಂಧಿಸಿದಂತೆ ಕಾರ್ಡ್‌ವೊಂದನ್ನು ನೀಡಲಾಗುತ್ತಿದೆ. ಇದನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು. ಪ್ರಸ್ತುತ ಇದನ್ನು ಉಚಿತವಾಗಿ ನೀಡಲಾಗುತ್ತಿದ್ದು, ಮುಂದಿನ ದಿನದಲ್ಲಿ ಇದಕ್ಕೆ ಶುಲ್ಕ ನಿಗದಿ ಪಡಿಸಲಾಗುತ್ತದೆ. ವಿದೇಶಾಂಗ ಸಚಿವಾಲಯದಲ್ಲಿ ನೋಂದಣಿ ಮಾಡಿಕೊಳ್ಳುವುದರಿಂದ ವಿದೇಶದಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯ ಅಧಿಕೃತ ಮಾಹಿತಿ ಲಭ್ಯವಾದಂತಾಗುತ್ತದೆ ಎಂದು ತಿಳಿಸಿದರು.

ಸಂವಾದದ ವೇಳೆ ಭಾರತ ಹಾಗೂ ವಿದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ವೀಸಾ ಪಡೆಯುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆ, ಪೊಲೀಸ್ ಠಾಣೆಗೆ ಅಲೆಯಬೇಕಾದ ಸ್ಥಿತಿ ಮತ್ತಿತರ ವಿಚಾರಗಳನ್ನು ಸಚಿವರ ಗಮನಕ್ಕೆ ತರಲಾಯಿತು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ಸಚಿವರಿಂದ ದೊರೆಯಿತು.

## ಎನ್‌ಆರ್‌ಐಗಳ ಜತೆ ಮದುವೆಯಾಗಲಿ!

ಅನಿವಾಸಿ ಭಾರತೀಯ ಮತ್ತು ಮೂಲ ಭಾರತೀಯರ ನಡುವೆ ಸಾಕಷ್ಟು ವ್ಯತ್ಯಾಸ ಇದೆ. ಈ ಅಸಮತೋಲನ ನಿವಾರಿಸಿ ಸಮತೋಲನ ಕಾಯ್ದುಕೊಳ್ಳಲು ಭಾರತದ ಯುವಕರೊಂದಿಗೆ ಎನ್‌ಆರ್‌ಐ ಯುವತಿಯರು, ಭಾರತದ ಯುವತಿಯರೊಂದಿಗೆ ಎನ್‌ಆರ್‌ಐ ಯುವಕರು ಮದುವೆಯಾಗಬೇಕು ಎಂದು ಎಚ್.ಎಸ್. ಶರ್ಮಾ ಎಂಬುವವರು ನೀಡಿದ ಸಲಹೆ ಸಂವಾದದಲ್ಲಿ ಪಾಲ್ಗೊಂಡಿದ್ದವರನ್ನು ನಗೆಗಡಲಲ್ಲಿ ತೇಲಿಸಿತು. ವಿದೇಶದಲ್ಲಿನ ಭಾರತೀಯ ವಿದ್ಯಾರ್ಥಿಗಳ ಮತ್ತು ಭಾರತದಲ್ಲಿನ ಅನಿವಾಸಿ ಭಾರತೀಯ ವಿದ್ಯಾರ್ಥಿಗಳ ಸಮಸ್ಯೆಗಳು ಕುರಿತು ಸಚಿವ ಜಾವಡೇಕರ್ ಮುಕ್ತ ಸಲಹೆ ಸೂಚನೆ ಪಡೆಯುತ್ತಿದ್ದಾಗ, ಎದ್ದು ನಿಂತ ಶರ್ಮಾ ಈ ಸಲಹೆ ಮುಂದಿಟ್ಟಾಗ ಸಚಿವರಾದಿಯಾಗಿ ಇಡೀ ಸಭೆಯಲ್ಲಿ ನಗುವಿನ ಅಲೆ. ಆದರೆ, ವೇದಿಕೆ ನಿರ್ವಾಹಕರು, ಇದು ಸಂವಾದಕ್ಕೆ ಸಂಬಂಧಪಡುವುದಿಲ್ಲ ಎಂದು ಶರ್ಮಾ ಅವರನ್ನು ಸುಮ್ಮನಾಗಿಸಿದರು.

## ಇಂದು ಪ್ರಧಾನಿ ಮೋದಿ ಭಾಷಣ



ರಾಜಧಾನಿಯಲ್ಲಿ ನಡೆಯುತ್ತಿರುವ ಮೂರು ದಿನಗಳ ಪ್ರವಾಸಿ ಭಾರತೀಯ ದಿವಸ ಸಮಾವೇಶದ ಎರಡನೇ ದಿನವಾದ ಭಾನುವಾರ ಪ್ರಧಾನಿ ನರೇಂದ್ರ ಮೋದಿ 'ಭಾರತ ಸೂಕ್ತ ಸ್ಥಳ, ಸೂಕ್ತ ಸಮಯ' ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಸಮಾವೇಶದಲ್ಲಿ ಪಾಲ್ಗೊಳ್ಳುವ ಸಲುವಾಗಿ ಶನಿವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿರುವ ಪ್ರಧಾನಿ ಮೋದಿ ರಾತ್ರಿ ಇಲ್ಲೇ ತಂಗಿದ್ದು, ಬೆಳಗ್ಗೆ 10 ಗಂಟೆಗೆ ಅಂತಾರಾಷ್ಟ್ರೀಯ ಸಮಾವೇಶ ಕೇಂದ್ರ ತಲುಪಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಅನಂತಕುಮಾರ್, ಪೋರ್ಚುಗಲ್ ಪ್ರಧಾನಿ ಡಾ.ಅಂತೋನಿಯೋ ಕೋಸ್ಟಾ ಸಹ ಭಾಗಿಯಾಗಲಿದ್ದಾರೆ.

# ಜೂ.30ರವರೆಗೆ ವೈದ್ಯರ ನೋಂದಣಿ ನವೀಕರಣ

**ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲೋಪತಿ ವೈದ್ಯರ ನೋಂದಣಿ ನವೀಕರಣವನ್ನು ಜೂ. 30ರೊಳಗೆ ಮುಗಿಸಲಾಗುವುದು. ಈ ಅವಧಿಯೊಳಗೆ ವೈದ್ಯರು ತಮ್ಮ ಸದಸ್ಯತ್ವ ನವೀಕರಿಸಿಕೊಳ್ಳಬೇಕಿದೆ ಎಂದು ಕರ್ನಾಟಕ ವೈದ್ಯಕೀಯ ಪರಿಷತ್ತಿನ (ಕೆಎಂಸಿ) ಅಧ್ಯಕ್ಷ ಡಾ. ಎಚ್. ವೀರಭದ್ರಪ್ಪ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ,"ಅಲೋಪತಿ ವೈದ್ಯರು 2011ಕ್ಕೆ ಮೊದಲು ಪ್ರಮಾಣಪತ್ರಗಳನ್ನು ನವೀಕರಿಸಿಕೊಳ್ಳಬಹುದು. ಜೂ. 30 ರೊಳಗೆ ನವೀಕರಿಸಿಕೊಳ್ಳದ ಪ್ರಮಾಣಪತ್ರಗಳು ಅಸಿಂಧುಗೊಳ್ಳಲಿವೆ. ನೋಂದಣಿ ನವೀಕರಿಸಿಕೊಳ್ಳದ ವೈದ್ಯರ ವಿವರವನ್ನು ಭಾರತೀಯ ವೈದ್ಯ ಪರಿಷತ್ತಿನ ರಿಜಿಸ್ಟ್ರಾರ್‌ಗೆ ಕಳುಹಿಸಲಾಗುವುದು," ಎಂದು ಹೇಳಿದರು.

"ನೋಂದಾಯಿತ ವೈದ್ಯರು ಮೃತಪಟ್ಟಿದ್ದರೂ, ಅವರ ಹೆಸರಿನಲ್ಲಿಯೇ ನರ್ಸಿಂಗ್ ಹೋಮ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ ಅದೇ ನೋಂದಣಿ ಪ್ರಮಾಣಪತ್ರಗಳನ್ನು ಆಧಾರವಾಗಿಟ್ಟುಕೊಂಡು ಹೊಸ ನರ್ಸಿಂಗ್ ಹೋಮ್‌ಗಳು ತಲೆ ಎತ್ತುತ್ತಿವೆ. ಇದಕ್ಕೆ ಕಡಿವಾಣ ಹಾಕಲು ವೈದ್ಯರ ಹಳೆಯ ನೋಂದಣಿ ಪ್ರಮಾಣಪತ್ರವನ್ನು ಪಡೆದು ಡಿಜಿಟಲ್ ಮಾದರಿಯ ಪ್ರಮಾಣಪತ್ರ ನೀಡಲಾಗುತ್ತದೆ. ಅದರಲ್ಲಿ ಸ್ಕ್ಯಾನ್ ಮಾಡಲಾದ ಭಾವಚಿತ್ರ, ಡಿಜಿಟಲ್ ಸಹಿ ಮತ್ತು ನಕಲು ಮಾಡಲಾಗದ ರೀತಿಯಲ್ಲಿ ಕೋಡಿಂಗ್ ವ್ಯವಸ್ಥೆ ಇರಲಿದೆ," ಎಂದು ವಿವರಿಸಿದರು.

"ನೋಂದಣಿ ಪ್ರಮಾಣಪತ್ರ ವಿತರಣೆಯ ಮಾಹಿತಿಯನ್ನು ಸರಕಾರಕ್ಕೂ ಸಲ್ಲಿಸಲಾಗುವುದು. ಈಗಾಗಲೇ ನೋಂದಣಿ ನವೀಕರಣ ಪ್ರಕ್ರಿಯೆ ಶುರುವಾಗಿದ್ದು, 70 ಸಾವಿರ ವೈದ್ಯರ ಪೈಕಿ 28 ಸಾವಿರ ಮಂದಿ ತಮ್ಮ ಪ್ರಮಾಣಪತ್ರಗಳನ್ನು ನವೀಕರಿಸಿಕೊಂಡಿದ್ದಾರೆ," ಎಂದು ಮಾಹಿತಿ ನೀಡಿದರು.

"ನೋಂದಣಿ ನವೀಕರಣಕ್ಕೆ ಒಂದು ಸಾವಿರ ರೂ. ಶುಲ್ಕ ನಿಗದಿಪಡಿಸಲಾಗಿದೆ. ಜ. 31ರವರೆಗೆ ಯಾವುದೇ ದಂಡ ವಿಧಿಸುವುದಿಲ್ಲ. ಫೆ.1 ರಿಂದ ಜೂ. 30ರವರೆಗೆ ಶುಲ್ಕದೊಂದಿಗೆ 500 ರೂ. ದಂಡ ವಿಧಿಸಲಾಗುತ್ತದೆ. ನವೀಕೃತ ಪ್ರಮಾಣಪತ್ರಕ್ಕೆ ಐದು ವರ್ಷದ ಮಾನ್ಯತೆ ಇರುತ್ತದೆ. ಬಯೋಮೆಟ್ರಿಕ್ ಮಾಹಿತಿ ಸಲ್ಲಿಸಿ, ಆನ್‌ಲೈನ್ ಮುಖಾಂತರವೂ ಪ್ರಮಾಣಪತ್ರ ನವೀಕರಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ," ಎಂದು ಹೇಳಿದರು.



ಕೆಎಂಸಿಯಲ್ಲಿ ನೋಂದಣಿಯಾಗಿರುವ ವೈದ್ಯರ ಸದಸ್ಯತ್ವ ನವೀಕರಣ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಲ್ಲ. ಹಾಗಾಗಿ, ಸದಸ್ಯತ್ವ ನವೀಕರಣ ಕಾರ್ಯ ಮುಂದುವರಿಯಲಿದೆ. ನವೀಕರಣ ಪ್ರಶ್ನಿಸಿ ನಾಲ್ವರು ವೈದ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯವು ಡಿ.29ರಂದು ಮಧ್ಯಾಂತರ ಆದೇಶ ನೀಡಿ ಅರ್ಜಿದಾರ ವೈದ್ಯರ ಸದಸ್ಯತ್ವ ರದ್ದುಗೊಳಿಸದಂತೆ ಸೂಚಿಸಿದೆಯೇ ಹೊರತು, ಸಂಘದ ಸದಸ್ಯತ್ವ ನವೀಕರಣಕ್ಕೆ ತಡೆಯಾಜ್ಞೆ ನೀಡಿಲ್ಲ," ಎಂದು ಸ್ಪಷ್ಟಪಡಿಸಿದರು.

**ಅನುಮತಿಗೆ ವಿರೋಧ:**

ರಾಜ್ಯ ಸರಕಾರವು ಆಯುಷ್ ವೈದ್ಯರಿಗೆ ಅಲ್ಪಾವಧಿ ಕೋರ್ಸ್ ಮುಖೇನ ಅಲೋಪತಿ ಚಿಕಿತ್ಸಾ ಪದ್ಧತಿ ಅಳವಡಿಸಿಕೊಳ್ಳಲು ಅನುಮತಿ ನೀಡಿರುವುದಕ್ಕೆ ಕರ್ನಾಟಕ ವೈದ್ಯಕೀಯ ಪರಿಷತ್ತು ತೀವ್ರ ವಿರೋಧ ವ್ಯಕ್ತಪಡಿಸಿದೆ.

"ವೈದ್ಯರ ಕೊರತೆ ನೀಗಿಸುವ ಕಾರಣವೊಡ್ಡಿ ಆರು ತಿಂಗಳ ಅಲೋಪತಿ ಕೋರ್ಸ್‌ನಲ್ಲಿ ವ್ಯಾಸಂಗ ಮಾಡಿದ ಆಯುಷ್ ವೈದ್ಯರಿಗೆ ಅಲೋಪತಿ ಚಿಕಿತ್ಸಾ ಪದ್ಧತಿ ಅಳವಡಿಸಿಕೊಳ್ಳಲು ಸರಕಾರ ಅವಕಾಶ ನೀಡಿರುವುದು ಸರಿಯಲ್ಲ, ಅಲೋಪತಿ ವೈದ್ಯ ಪದ್ಧತಿಯು ಆರು ತಿಂಗಳಲ್ಲಿ ಕಲಿಯುವಂತಹದ್ದಲ್ಲ," ಎಂದು ಕೆಎಂಸಿ ಅಧ್ಯಕ್ಷ ಡಾ. ಎಚ್.ವೀರಭದ್ರಪ್ಪ ಹೇಳಿದರು.